ಭಾರೀ ಮತ್ತು ಮಧ್ಯಮ ಕೈಗಾರಿಕೆ ಯೋಜನೆಗಳ ಪ್ರಗತಿ

399(838) ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆಯಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳಾವುವು (ತಾಲ್ಲೂಕುವಾರು, ಯೋಜನಾವಾರು ವಿವರ ಒದಗಿಸುವುದು);

ಆ) ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು; ಅವುಗಳ ರೂಪು ರೇಷೆಗಳೇನು (ತಾಲ್ಲೂಕುವಾರು, ಯೋಜನಾವಾರು ವಿವರ ಒದಗಿಸುವುದು)

ಇ) ಜಿಲ್ಲೆಯಲ್ಲಿ ಇಲಾಖೆಗೆ ಹೊಸ ಪ್ರಸ್ತಾವನೆಗಳೇನಾದರೂ ಬಂದಿವೆಯೇ; ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು)

ಅ) ಬೆಳಗಾವಿ ಜಿಲ್ಲೆಯಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಆ) ಭಾರೀ ಮತ್ತು ಮಧ್ಯಮ ಕೈಗಾರಿಕಾ ವಲಯದ ಅಭಿವೃದ್ಧಿಗಾಗಿ ಪ್ರಸ್ತುತ ಚಾಲ್ತಿಯಲ್ಲಿರುವ 2009–14 ಕೈಗಾರಿಕಾ ನೀತಿಯಡಿ ಬೆಳಗಾವಿ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳು ಕೈಗಾರಿಕಾ ಸ್ಥಾಪನೆಗೆ ಈ ಕೆಳಕಂಡ ಯೋಜನೆಗಳಡಿ, ಕೆಳಕಂಡ ಅವಕಾಶವಿರುತ್ತದೆ

1. **ವ್ಯಾಟ್ ಪಾವತಿ ಮೇಲೆ ಬಡ್ಡಿ ರಹಿತ ಸಾಲ:** ಘಟಕಗಳು ಹೂಡುವ ಬಂಡವಾಳ ಹೂಡಿಕೆ ಮತ್ತು ನೀಡುವ ಉದ್ಯೋಗ ಅವಕಾಶವನ್ನಾದರಿಸಿ ಭಾರಿ ಮತ್ತು ದೊಡ್ಡ ಕೈಗಾರಿಕೆಗಳಿಗೆ ವ್ಯಾಟ್ ಪಾವತಿ ಮೇಲೆ ಬಡ್ಡಿ ರಹಿತ ಸಾಲ.
2. **ಆಂಕರ್ ಘಟಕ ಸಹಾಯಧನ:** ಕನಿಷ್ಠ ₹.50 ಕೋಟಿ ಬಂಡವಾಳ ಹೂಡಿಕೆ ಮತ್ತು ಕನಿಷ್ಠ 100 ಜನರಿಗೆ ಉದ್ಯೋಗ ನೀಡುವ ಮೊದಲ 2 ಘಟಕಗಳಿಗೆ ಆಂಕರ್ ಘಟಕ ಸಹಾಯಧನ.
3. **ಸಕ್ಕರೆ ಕಾರ್ಖಾನೆಗಳಿಗೆ ಬೆಂಬಲ:** ಜಿಲ್ಲೆಯಲ್ಲಿ ಸ್ಥಾಪನೆಯಾಗುವ ಹೊಸ ಮತ್ತು ವಿಸ್ತರಣ ಘಟಕಗಳಿಗೆ, ಖರೀದಿಸುವ ಕಬ್ಬು ತೆರಿಗೆ ಪಾವತಿ ಮೇಲೆ ಬಡ್ಡಿ ರಹಿತ ಸಾಲ ಸೌಲಭ್ಯ,
4. ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪನೆಯಾಗುವ ಘಟಕಗಳಿಗೆ ತೆರಿಗೆ ವಿನಾಯಿತಿ ರಿಯಾಯಿತಿ ಪ್ರೋತ್ಸಾಹಗಳಾದ ಮುದ್ರಾಂಕ ಶುಲ್ಕ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ, ಭೂ ಪರಿವರ್ತನ ಶುಲ್ಕ ಮರುಪಾವತಿ ನೀಡಲು ಅವಕಾಶವಿರುತ್ತದೆ.
5. ಕರ್ನಾಟಕ ಎರೋಸ್ಪಸ್ ಪಾಲಿಸಿ 2013–23 ರನ್ವಯ ಬೆಳಗಾವಿ ಜಿಲ್ಲೆಯಲ್ಲಿ ₹.20 ಕೋಟಿ ಉತ್ಪಾದನ ಕ್ಲಷ್ಟರ್ ಸ್ಥಾಪನೆಗೆ ಅವಕಾಶ ನೀಡಿದೆ.
6. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಬೆಳಗಾವಿ ಜಿಲ್ಲೆಯ ಚಿಕೋಡಿ ತಾಲ್ಲೂಕಿನಲ್ಲಿ ಹೊಸ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆಯನ್ನು ₹.28.65 ಕೋಟಿಗಳ ಯೋಜನಾ ವೆಚ್ಚದಲ್ಲಿ ಸ್ಥಾಪಿಸಲು ಸರ್ಕಾರವು ತನ್ನ ಆದೇಶ ದಿನಾಂಕ 13.11.2013 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಸದರಿ ತರಬೇತಿ ಕೇಂದ್ರಕ್ಕೆ ಕೇಂದ್ರ ಸರ್ಕಾರದ OTACA (One Time Additional Central Assistance) ಯೋಜನೆಯ ಅನುದಾನ ಮತ್ತು ರಾಜ್ಯ ಸರ್ಕಾರದ ಪಾಲಿನ ಅನುದಾನದಿಂದ

ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಉದ್ದೇಶಕ್ಕಾಗಿ ಈಗಾಗಲೇ 8 ಎಕರೆ ಜಾಗವನ್ನು ಹಂಚಿಕೆ ಮಾಡಲಾಗಿದೆ.

ಇತರೆ ಕೈಗಾರಿಕೆಗಳಿಗೆ ಕುಶಲಕರ್ಮಿಗಳಿಗೆ ಹಮ್ಮಿಕೊಂಡಿರುವ ಯೋಜನೆಗಳ ವಿವರ ಅನುಬಂಧ–2ರಲ್ಲಿ ಲಗತ್ತಿಸಿದೆ.

ಇ) ಮಾರ್ಚ್–2013ರಿಂದ ಡಿಸೆಂಬರ್–2013ರವರೆಗೆ ಬೆಳಗಾವಿ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆಗೆ 7 ಹೊಸ ಪ್ರಸ್ತಾವನೆಗಳು ಬಂದಿರುತ್ತವೆ. ಆ ಪೈಕಿ 5 ಪ್ರಸ್ತಾವನೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ.

ಬೆಳಗಾವಿ ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಭಾರೀ ತ್ತು ಮಧ್ಯಮ ಕೈಗಾರಿಕೆಗಳ ವಿವರಗಳು

ಪ್ರಶ್ನೆ ಸಂಖ್ಯೆ 838ಕ್ಕೆ ಅನುಬಂಧ–1

ಬೆಳಗಾವಿ ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳ ವಿವರಗಳು

ಪ್ರಶ್ನೆ ಸಂಖ್ಯೆ 8338ಕ್ಕೆ ಅನುಬಂಧ-I

ಕ್ರ. ಸಂ.	ಘಟಕಗಳ ಹೆಸರು	ತಾಲೂಕು	ಪ್ರಮುಖರು	ಬಂಡವಾಳ ತೊಡಗಿಸಿರುವುದು ರೂ.ಕೋಟಿ	ಉದ್ಯೋಗಾವಕಾಶ
1	ಮೆ: ಆಂಗಡಿ ಶುಗರ್ಸ್ ಅಂಡ ಪವರ್ ಲಿ. ಶ್ರೀ ಲಕ್ಷ್ಮೀ ಕಾಂಪ್ಲೆಕ್ಸಿನ ಎಸಿಎಂಸಿ ರೋಡ,ಬೆಳಗಾವಿ ಸ್ಥಳ: ಗುಣಕೊಪ್ಪ, ತಾ:ಬೈಲಹೊಂಗಲ	ಬೈಲಹೊಂಗಲ	ಸಕ್ಕರೆ, ಕೋ-ಜನರೇಷನ್	150	450
2	ಮೆ: ಕಲೋನ್ಸರ್ ಟಾಯೋಟಾ ಟಕ್ಷಚ್ಯಿಲ ಮಷಿನರಿ ಪ್ರೈವೆ ಲ್ಲಾನಂ. 1013,ಫೇಸ 2, ಜಿಗಣಿ,ಬೆಂಗಳೂರು ಸ್ಥಳ: ಡೊಂಬರಕೊಪ್ಪ ,ಕಿತ್ತೂರ ತಾ: ಬೈಲಹೊಂಗಲ	ಬೈಲಹೊಂಗಲ	ಟಕ್ಷಚ್ಯಿಲ ಮಷಿನರಿ, ಆಟೋ ಕಾಂಪೊನಂಟ್ಸ	1334	350
3	ಮೆ: ಇನಾಮದಾರ ಶುಗರ್ಸ ಲಿ., 69, 2ನೇ ಮಹಡಿ, 6ನೇ ಕ್ರಾಸ, ಸವ್ವದಿರಿ ಆರ್ಚರ್ಡುಮಾಲ, ಬೆಳಗಾವಿ ಸ್ಥಳ: ಹಿರೇಕೊಪ್ಪ ,ನಂದಗಾಂವ.	ಸವದತ್ತಿ	ಶುಗರ್ ಅಂಡ ಕೋ-ಜನರೇಷನ್	137	245
4	ಯಾದವಾಡ ಸಿಮೆಂಟ್ ಪ್ರೈವೆಟ್. ಯಾದವಾಡ ತಾ. ಗೋಕಾಕ	ಗೋಕಾಕ	ಸಿಮೆಂಟ	10	70
5	ಶ್ರೀ ಅರಿಹಂತ ಕೋ-ಆಪ ಟಕ್ಷಚ್ಯಿಲ ಲ ಮೋರಗಾಂವ ತಾ: ಚಿಕ್ಕೋಡಿ	ಚಿಕ್ಕೋಡಿ	ಕಾಟನ್ ಯಾರ್ನ ಸ್ಪಿನ್ನಿಂಗ	30	150
6	ಶ್ರೀನಿವಾಸ ಇಂಡಕ್ಷನ್ ಹಾರ್ಡನಿಂಗ, 414/1, 414/2, ಪಾಸಾಪೂರ ರೋಡ, ಉದ್ಯಮಬಾಗ, ಬೆಳಗಾವಿ	ಬೆಳಗಾವಿ	ಕ್ಯಾಂಕಶಾಫ್ಟ	20	60
7	ಶ್ರೀ ಆನಂದ ಲೈಫ್ ಸ್ಟೈಲ್ಸ್, ಹೊನಗಾ, ಬೆಳಗಾವಿ	ಬೆಳಗಾವಿ	ಫಾರ್ಮಾಸ್ಯುಟಿಕಲ್ಸ	55	60
8	ಬೆಳಗಾಮ್ ಆಕ್ಸಾ ನಾಲ್ಟ ಪ್ರೈವೆಲ ನಾಕಗಿ, ಬೆಳಗಾವಿ	ಬೆಳಗಾವಿ	ಇಂಡಸ್ಟ್ರಿಯಲ್ ಬಾಲ್ಟ	10	150
9	ವೇಗಾ ಕಾಂಪೊನೆಟ ಲಿ. ಬಮಸಿಲ್ ಇಂಡಸ್ಟ್ರಿಯಲ್ ಎಸ್ಟೇಟ, ಬೆಳಗಾವಿ	ಬೆಳಗಾವಿ	ಡಿಕ್ಕಿಪ್ಪ	15	200
10	ಕ್ವಾರಟ ಟ್ರೇಡಿಂಗ್ ಫರ್ಮ್ ಪ್ರೈವೆ ಮುಚ್ಚ, ಬೆಳಗಾವಿ	ಬೆಳಗಾವಿ	ಪೌಚ್ ಫೀಡ್	13.43	400

ಅನುಬಂಧ–2

ಇತರೆ ಕೈಗಾರಿಕೆಗಳಿಗೆ/ಕುಶಲಕರ್ಮಿಗಳಿಗೆ ಹಮ್ಮಿಕೊಂಡಿರುವ ಯೋಜನೆಗಳಿಗೆ

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನಾ ಯೋಜನೆ

1) ಪಿ.ಎಂ.ಇ.ಜಿ.ಪಿ:– ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನಾ ಯೋಜನೆಯಡಿಯಲ್ಲಿ ನಿರುದ್ಯೋಗಿ ಯುವಕ–ಯುವತಿಯರಿಗೆ ಕೈಗಾರಿಕೆ ಮತ್ತು ಸೇವಾ ಘಟಕಗಳಿಗೆ ಬ್ಯಾಂಕ ಮೂಲಕ ಸಾಲ ಮಂಜೂರಾತಿ ನೀಡಿ, ಸಾಲ ಬಿಡುಗಡೆ ಮಾಡಲಾಗುವುದು ಮತ್ತು ಇದಕ್ಕೆ ಶೇ.15ರಿಂದ 30ರ ವರೆಗೆ ಸಹಾಯಧನ ನೀಡಲು ಅವಕಾಶ ವಿರುತ್ತದೆ,

2013–14ನೇ ಸಾಲಿನ ಬೆಳಗಾವಿ ಜಿಲ್ಲೆಯ ವಿವರ ಈ ಕೆಳಗಿನಂತಿರುತ್ತದೆ.

ಅ.ನಂ	ತಾಲೂಕಿನ ಹೆಸರು	ಗುರಿ	ಶಿಫ್ಪಾರಸ್ಸು ಮಾಡಿದ ಅರ್ಜಿಗಳ ಸಂಖ್ಯೆ
1	ಬೆಳಗಾವಿ	36	36
2	ಖಾನಾಪೂರ	05	05
3	ಹುಕ್ಕೇರಿ	09	09
4	ಚಿಕ್ಕೋಡಿ	10	10
5	ಅಥಣಿ	03	03
6	ರಾಯಬಾಗ	09	09
7	ರಾಮದುರ್ಗ	11	11
8	ಗೋಕಾಕ	06	06
9	ಬೈಲಹೊಂಗಲ	16	16
10	ಸವದತ್ತಿ	08	08
	ಒಟ್ಟು	**113**	**113**

2) ವಿಶೇಷ ಘಟಕ ಯೋಜನೆ ಅಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ವಸತಿ–ವ–ಕಾರ್ಯಾಗಾರ ಮತ್ತು ತರಬೇತಿ ನೀಡಿ ಉಚಿತ ಉಪಕರಣಗಳನ್ನು ನೀಡಲಾಗುವುದು, ಅದರ ವಿವರ ಈ ಕೆಳಗಿನಂತಿರುತ್ತದೆ.

2013–14ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ವಸತಿ–ವ–ಕಾರ್ಯಾಗಾರ

ಅ.ನಂ	ತಾಲೂಕು	ಫಲಾನುಭವಿಗಳ ಸಂಖ್ಯೆ
1	ಗೋಕಾಕ	13
2	ರಾಯಬಾಗ	02
3	ಸವದತ್ತಿ	03
4	ಬೈಲಹೊಂಗಲ	02
	ಒಟ್ಟು	**20**

2013–14ನೇ ಸಾಲಿನ ಗಿರಿಜನ ಉಪಯೋಜನೆಯಡಿ ವಸತಿ–ವ–ಕಾರ್ಯಾಗಾರ

ಅ.ನಂ	ತಾಲೂಕು	ಫಲಾನುಭವಿಗಳ ಸಂಖ್ಯೆ
1	ಗೋಕಾಕ	05
	ಒಟ್ಟು	**05**

2013–14ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ತರಬೇತಿ ವಿವರ

ಅ.ನಂ	ತಾಲೂಕು	ಫಲಾನುಭವಿಗಳ ಸಂಖ್ಯೆ
1	ಬೆಳಗಾವಿ	10
2	ಹುಕ್ಕೇರಿ	20
3	ಚಿಕ್ಕೋಡಿ	20
	ಒಟ್ಟು	**50**

2013–14ನೇ ಸಾಲಿನ ಗಿರಿಜನ ಉಪಯೋಜನೆಯಡಿ ತರಬೇತಿ ವಿವರ

ಅ.ನಂ	ತಾಲೂಕು	ಫಲಾನುಭವಿಗಳ ಸಂಖ್ಯೆ
1	ಬೆಳಗಾವಿ	10
2	ಚಿಕ್ಕೋಡಿ	40
	ಒಟ್ಟು	**50**

3) 2013–14 ನೇ ಸಾಲಿನ ಉದ್ಯಮಶೀಲತಾ ಜಾಗೃತಿ/ಅಭಿವೃದ್ಧಿ ಕಾರ್ಯಕ್ರಮ

ಅ.ನಂ	ತಾಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ	ಮೊತ್ತ ರೂ.
1	ಬೆಳಗಾವಿ	50	10000–00
2	ಖಾನಾಪುರ	50	10000–00
3	ಹುಕ್ಕೇರಿ	50	10000–00
4	ಚಿಕ್ಕೋಡಿ	50	10000–00
5	ಅಥಣಿ	50	10000–00
6	ರಾಯಬಾಗ	50	10000–00
7	ರಾಮದುರ್ಗ	50	10000–00
8	ಗೋಕಾಕ್	50	10000–00
9	ಬೈಲಹೊಂಗಲ	50	10000–00
10	ಸವದತ್ತಿ	50	10000–00
	ಒಟ್ಟು	**50**	**10000–00**

4) ಕ್ಲಸ್ಟರ ವಿವರ

ಕ್ರ.ಸಂ.	ಕ್ಲಸ್ಟರ ಹೆಸರು	ಸ್ಥಳ
1	ಜಾಗರಿ ಕ್ಲಸ್ಟರ(ಎಸ್.ಸಿ)	ಕುಡಚಿ ತಾ:ರಾಯಬಾಗ
2	ದ್ರಾಕ್ಷಿ ಸಂಸ್ಕರಣೆ(ಎಸ್.ಸಿ)	ಕುಡಚಿ ತಾ:ರಾಯಬಾಗ
3	ಬೆಳ್ಳಿ ಆಭರಣಗಳು	ಮಾಂಗೂರ ತಾ:ಚಿಕ್ಕೋಡಿ
4	ಗಾರ್ಮೆಂಟ	ನಿಪ್ಪಾಣಿ ತಾ:ಚಿಕ್ಕೋಡಿ
5	ವುಡನ ಪ್ಯಾಟರ್ನ್	ಬೆಳಗಾವಿ ತಾ:ಬೆಳಗಾವಿ
6	ಮಶೀನ ಟೂಲ್ಸ	ಬೆಳಗಾವಿ ತಾ:ಬೆಳಗಾವಿ
7	ಲೆದರ (ಎಸ್.ಸಿ)	ಮದಭಾವಿ ತಾ:ಅಥಣಿ
8	ಗಾರ್ಮೆಂಟ	ರಾಮದುರ್ಗ ತಾ:ರಾಮದುರ್ಗ

ಟ್ರಾಫಿಕ್ ಸಮಸ್ಯೆ

400(344) ಶ್ರೀ ಅಖಂಡ ಶ್ರೀನಿವಾಸಮೂರ್ತಿ.ಆರ್.

ಅ) ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಟ್ಯಾನಿ ರೋಡ್ ಹಾಗೂ ದಿನ್ನೂರು ಮುಖ್ಯರಸ್ತೆಗಳಲ್ಲಿ ಜನ ಸಂದಣಿ ಮತ್ತು ವಾಹನಗಳ ಸಂಚಾರದಿಂದ ಟ್ರಾಫಿಕ್ ಸಮಸ್ಯೆ ಎದುರಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳ ಅಗಲೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು(ಪೂರ್ಣ ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಈ ರಸ್ತೆಗಳ ಅಗಲೀಕರಣಕ್ಕೆ ಜಾಗ ಬಿಟ್ಟುಕೊಡುವ ಕಟ್ಟಡ ಮಾಲೀಕರಿಗೆ ನೀಡುವ ಪರಿಹಾರದ ಮೊತ್ತವೆಷ್ಟು (ಪೂರ್ಣ ವಿವರ ನೀಡುವುದು);